ಇವ ದೂರದ ತೋಟದ ತುದಿಯಲ್ಲಿ ಉರಿಯುತ್ತಿದ್ದ ಚಿತೆ ತನ್ನ ಜೀವ ಕಳೆದುಕೊಳ್ಳುವುದನ್ನೇ ನೋಡುತ್ತಾ ಕುಳಿತಿದ್ದ.

ಹಿಂದೆ ಬಂದು ನಿಂತ ತಮ್ಮ, 'ರಾತ್ರಿ ಹತ್ತೂವರೆ ಗಂಟೆಯ ಫ್ಲೈಟಿಗೆ ವಾಪಸು ಹೋಪುದಾದ್ರೆ ನೀನ ಹೊರಡೂದು ಒಳ್ಳೇದ. ನಾಳೆ ನಿನ್ನ ಬೋರ್ಡ್ ಮೀಟಿಂಗ್ ಇತ್ತಲ್ದಾ?' ಎಂದಾಗ ಮೈಕೊಡವಿಕೊಂಡು ಮೇಲೆದ್ದ. ಯಾಕೋ ಮನೆಯೊಳಗೆ ಹೋಗಿ ಚಿಕ್ಕಪ್ಪ- ಚಿಕ್ಕಮ್ಮನನ್ನು ನೋಡಬೇಕು ಎಂದೆನ್ನಿಸಲಿಲ್ಲ.

'ನಾ ಹೊರಟೆ. ಎಲ್ರಿಗೂ ಹೇಳಿಬಿಡ' ಎಂದು ತಮ್ಮನಿಗೆ ಹೇಳಿದವನೇ ಮನೆಯ ಮೇಲಿನ ಹಾಡಿಯೊಳಗೆ ನಿಂತಿದ್ದ ಕಾರಿನತ್ತ ಹೆಜ್ಜೆ ಹಾಕಿದ. ಒಳಗೆ ಮಲಗಿದ್ದ ಡ್ರೈವರ್ ಮಂಜುವನ್ನು ಎಬ್ಬಿಸಿ, 'ಸೀದಾ ಮಂಗ್ಳೂರು ಏರ್‌ಪೋರ್ಟ್ ಎಂದ'.

ಕೊಲ್ಲೂರು ಘಾಟಿಯ ಹಾವಿನಂತ ರಸ್ತೆಯಲ್ಲಿ ಕಾರು ವೇಗವಾಗಿ ಕೆಳಗಿಳಿಯುತ್ತಿದ್ದರೆ ಅಜ್ಜ-ಅಜ್ಜಿ, ಅಪ್ಪ-ಅಮ್ಮ, ದೊಡ್ಡಪ್ಪ- ದೊಡ್ಡಮ್ಮ, ಅಣ್ಣ... ಹುಟ್ಟಿ ಬೆಳೆದ ಮನೆಯ ಒಂದೊಂದು ಅಂಗುಲವೂ, ಒಂದೊಂದು ನೆನಪಿನ ಚಿತ್ರಗಳೂ ಹಾದು ಹೋದವು.

'ಎಷ್ಟು ದೂರ ಹೋಗಿ ಬಿಟ್ಟಿದ್ದೀನಲ್ಲಾ? ಒಮ್ಮೊಮ್ಮೆ ರಂಗುರಂಗಿನ ಜಗತ್ತಿಗೆ ವಿದಾಯ ಹೇಳಿ, ಎಲ್ಲವನ್ನೂ ಬಿಟ್ಟು ಸುಮ್ಮನೆ ಊರಿಗೆ ಬಂದು ಹುಟ್ಟಿದ ಮನೆಯಲ್ಲಿಯೇ ತೋಟದ ಕೆಲಸ ಮಾಡಿಕೊಂಡು ಬದುಕು ಸವೆಸಬೇಕು ಎಂದೆನ್ನಿಸುತ್ತದೆ. ಆದರೆ, ಬದುಕಲ್ಲಿ ಮುಂದಿಟ್ಟ ಹೆಜ್ಜೆಗಳನ್ನು ಅಷ್ಟು ಸುಲಭವಾಗಿ ಹಿಂದಿಡಲಾಗುವುದಿಲ್ಲ. ಕೈಕೊಟ್ಟವಳ ಮೇಲಿನ ಸಿಟ್ಟಿಗೆ ಐಬಿಎಂ ಬಿಟ್ಟು ಟಿಸಿಎಸ್ ಸೇರಿ ಹಲವು ವರ್ಷಗಳಾಗಿದ್ದವು. ವೈಯಕ್ತಿಕ ಬದುಕು ಕೈಕೊಟ್ಟರೂ ವೃತ್ತಿಪರ ಬದುಕು ಗಟ್ಟಿಯಾಗುತ್ತಲೇ ಸಾಗಿತ್ತು. ಅದೆಷ್ಟು ಗಟ್ಟಿಯಾಗಿತ್ತು ಎಂದರೆ, ಟಿಸಿಎಸ್ ಬೋರ್ಡ್‌ನಲ್ಲಿ ನಿರ್ದೇಶಕನ ಸ್ಥಾನ ಸಿಗುವವರೆಗೆ.

ಬೋರ್ಡ್‌ನಲ್ಲಿ ನಿರ್ದೇಶಕನ ಸ್ಥಾನ! ಅದೂ ಅತಿ ಚಿಕ್ಕ ವಯಸ್ಸಿನಲ್ಲಿ!? ಇದು ಒಬ್ಬ ಮನುಷ್ಯ ಬದುಕಿನಲ್ಲಿ ಗಟ್ಟಿಯಾದ ಎನ್ನುವುದರ ಸಾಕ್ಷಿಯೇ? ಬದುಕೆಂದರೆ ವೈಯಕ್ತಿಕವೇ? ವೃತ್ತಿಯೇ? ಅಥವಾ ಎರಡರ ಮಿಶ್ರಣವೇ? ಅಥವಾ ಏನೂ ಇಲ್ಲವೇ? ಇದೊಂದು ಅನಿರೀಕ್ಷಿತ ಘಟನೆಗಳ ಸರಮಾಲೆಯೇ!? ಒಂದೂ ಅರ್ಥವಾಗದ ಸ್ಥಿತಿಯಲ್ಲಿದ್ದ ಇವ.

ಕಾರು ಕೊಲ್ಲೂರು ಘಾಟಿಯಿಳಿದು, ಕುಂದಾಪುರ ದಾಟಿ, ಉಡುಪಿ ಹಾದು, ಸುರತ್ಕಲ್ ಸುತ್ತಿ, ಬಜ್ಪೆಯ ಏರ್‌ಪೋರ್ಟ್ ತಲುಪುವವರೆಗೆ ವಾಟ್ಸ್ ಆಪ್‌ನಲ್ಲಿ ಕಂಡಿದ್ದ ಅಣ್ಣ ನೇಣು ಹಾಕಿಕೊಂಡಿದ್ದ ನಂತರದ ತೇಲಾಡುತ್ತಿದ್ದ ದೇಹದ ವಿಡಿಯೋವೇ ಇವನನ್ನು ಕಾಡಿತ್ತು.

ಆ ಕಾಡುವಿಕೆಯ ನಡುವೆಯೇ ಚೆಕ್ ಇನ್ ಮುಗಿಸಿ, ಸೆಕ್ಯುರಿಟಿ ದಾಟಿ 4A ಮುಂದಿನ ಕುರ್ಚಿಗಳ ಪೈಕಿ ಮೂಲೆಯಲ್ಲಿದ್ದ ಕುರ್ಚಿಯಲ್ಲಿ ಕೂತಾಗಲೇ ಅವಳು ಬಂದು ಕೂತಿದ್ದು!

ಹಾಗೆ ನೋಡಿದರೇ ಇವನಿನ್ನೂ ಅವಳ ಮುಖವನ್ನು ಕೂಡ ಪೂರ್ತಿಯಾಗಿ ನೋಡಿರಲಿಲ್ಲ. ಕೋವಿಡ್ ಮುಸುಕು ಅದನ್ನೂ ಮರೆ ಮಾಡಿತ್ತು. ನೋಡಿದ್ದು ಆ ಎರಡು ಹೊಳೆವ, ಎಲ್ಲವನ್ನೂ ಸೆಳೆದು ತನ್ನೊಳಗೆ ಸೇರಿಸಿಕೊಂಡಿದ್ದ ಕಣ್ಣುಗಳನ್ನು ಮಾತ್ರ. ಅದರಲ್ಲಿಯೇ ಅವಳು ಇವನನ್ನು ಸೆಳೆದು ತನ್ನೊಳಗೆ ಅಡಗಿಸಿಕೊಂಡಾಗಿತ್ತು. ಬೋರ್ಡಿಂಗ್ ಅನೌನ್ಸ್ ಆಗಲು ಇನ್ನೂ ಮುಕ್ಕಾಲು ಗಂಟೆಯಿತ್ತು. ಅದೃಷ್ಟಕ್ಕೆ ಫ್ಲೈಟ್ ಆನ್ ಟೈಮ್‌ನಲ್ಲಿತ್ತು.

ಮೂವರೇ ಕೂರಬಹುದಾಗಿದ್ದ ಆ ಸರಣಿ ಚೇರ್‌ಗಳಲ್ಲಿ ಬಲಬದಿಯಲ್ಲಿ ಇವ ಕೂತಿದ್ದ. ನಡುವೆ ಅವಳ ಬ್ಯಾಗ್. ಎಡಬದಿಯಲ್ಲಿ ಆಕೆ ಬಂದು ಕೂತಳು. ಬೋರ್ಡಿಂಗ್ ಶುರುವಾಗಲು ಇನ್ನೂ ಅರ್ಧ ಗಂಟೆಯಿದ್ದಾಗ, ಒಮ್ಮೆ ತನ್ನ ಮಾಸ್ಕ್ ತೆಗೆದು ಇವನತ್ತ ನೋಟ ಹರಿಸಿದ ಅವಳು, ಕಣ್ಣಲ್ಲೇ 'ಹಾಯ್' ಹೇಳಿ, ಒಂದು ನಿಮಿಷ ಬ್ಯಾಗ್ ನೋಡ್ಕೊಳ್ಳಿ ಎಂಬ ಸೂಚನೆ ನೀಡಿ, ರೆಸ್ಟ್ ರೂಂ ಕಡೆ ಹೆಜ್ಜೆ ಹಾಕಿದಳು. ಇವನ ಮುಂದೆಯೇ ಅವಳು ಹಾದು ಹೋದಾಗ ಅವಳು ಹಾಕಿದ್ದ ಪರ್‌ಫ್ಯೂಂ ಸುವಾಸನೆ ಇವನ ಮೂಗಿಗೆ ಬಡಿಯಿತು.

ಬಕಾರ್ಟ್ ರೋಗ್ 450...

ಅವಳು ವಾಪಸು ಬರುವ ಸಂದರ್ಭದಲ್ಲಾದರೂ, ಎದ್ದು ನಿಂತು 'ಹಾಯ್' ಹೇಳಬೇಕು ಎಂದುಕೊಂಡವ, ಕ್ಷಣ ಮಾತ್ರದಲ್ಲಿ 'ಬೇಡ' ಎಂಬ ನಿರ್ಧಾರಕ್ಕೆ ಬಂದಿದ್ದ. ಆಕೆ ಕೂಡ ತಲೆ ತಗ್ಗಿಸಿ, ಪಕ್ಕದ ಕುರ್ಚಿಯಲ್ಲಿ ಬಂದು ಕೂತು ಮತ್ತೆ ಮೊಬೈಲ್‌ನಲ್ಲಿ